# ಶ್ರೀರಾಮನಾಮ ಸಂಕೀರ್ತನೆಯ ಕರ್ತೃ

**ಕೆ. ಆರ್. ಮೋಹನ್**

ತಮ್ಮ ಆಧ್ಯಾತ್ಮಿಕ ಮೇರು ವ್ಯಕ್ತಿತ್ವಕ್ಕೆ ಹೆಸರಾಗಿದ್ದ ಪೂಜ್ಯ ಸ್ವಾಮಿ ಬ್ರಹ್ಮಾನಂದರು ತಮ್ಮದೇ ಆದ ರೀತಿಯಲ್ಲಿ ವಿವಿಧ ಸಾಂಸ್ಕೃತಿಕ ಪರಂಪರೆಗಳ ನಡುವೆ ಸಮನ್ವಯವನ್ನು ಸಾಧಿಸಲು ಪ್ರಯತ್ನಿಸಿದರು. ದಕ್ಷಿಣ ಪ್ರದೇಶದ ನಾಗಲಿಂಗ ಪುಷ್ಪವನ್ನು ಭುವನೇಶ್ವರ ಹಾಗೂ ಕಲ್ಕತ್ತೆಯಲ್ಲಿ ಬೆಳೆಸಿದರು. ಬಂಗಾಳದ ಉತ್ತಮ ಜಾತಿಯ ಮಾವಿನ ತಳಿಗಳನ್ನು ದಕ್ಷಿಣದ ಕೇಂದ್ರಗಳಲ್ಲಿ ನೆಡಿಸಿದರು. ಇಲ್ಲಿನ ರಸಂ ಮುಂತಾದ ಅಡುಗೆಯ ವಿಧಾನಗಳನ್ನು ಅಲ್ಲಿ ಪರಿಚಯಿಸಿ, ಬಂಗಾಳದಲ್ಲಿ ಪ್ರಸಿದ್ಧವಾಗಿದ್ದ ದುರ್ಗಾಪೂಜೆ, ಕಾಳೀಪೂಜೆಯನ್ನು ಮದರಾಸಿನಲ್ಲಿ ಪ್ರಾರಂಭಿಸಿದರು. ದಕ್ಷಿಣ ದೇಶದಲ್ಲಿ ಪ್ರಸಿದ್ಧವಾಗಿದ್ದ ರಾಮನಾಮ ಸಂಕೀರ್ತನೆಯನ್ನು ಉತ್ತರ ಭಾರತದಲ್ಲೂ ಹಾಡುವಂತೆ ಮಾಡಿದರು. ಪ್ರಾರಂಭದಲ್ಲಿ ಮತ್ತು ಅಂತ್ಯದಲ್ಲಿ ತುಲಸೀದಾಸರ ಕೆಲವು ದೋಹಾಗಳನ್ನು ಅದಕ್ಕೆ ಅವರೇ ಸೇರಿಸಿದರು. ಈಗ ಎಲ್ಲೆಡೆ ರಾಮಕೃಷ್ಣ ಆಶ್ರಮಗಳಲ್ಲಿ ಏಕಾದಶಿ ಹಾಗೂ ರಾಮನವಮಿಯಂದು ಇದನ್ನು ಹಾಡಲಾಗುತ್ತಿದೆ. ಈ ಸಂಕೀರ್ತನೆಯನ್ನು ಬರೆದ ಕವಿ ಯಾರೆಂಬುದರ ಶೋಧನೆಯಲ್ಲಿ ತಮಗಾದ ಅನುಭವವನ್ನು ಹಂಚಿಕೊಂಡಿರುವ ಲೇಖಕರು ಮೈಸೂರು ನಿವಾಸಿಗಳು.

ಶ್ರೀರಾಮನಾಮ ಸಂಕೀರ್ತನೆಯು ಬಹಳ ಜನಪ್ರಿಯವೂ, ಹಾಗು ಸರ್ವಮಾನ್ಯವೂ ಆದ ಕೃತಿಯಾಗಿದೆ. ಇದರಲ್ಲಿ ರಾಮನ ಮಹಿಮೆಯನ್ನು, ಅವನ ನಾಮಗಳ ಮೂಲಕ ತಿಳಿಸಿ, ರಾಮಾವತಾರದ ಪ್ರಮುಖ ಘಟನೆಗಳನ್ನು ನಿರೂಪಿಸಲಾಗಿದೆ. ಶ್ರೀರಾಮಕೃಷ್ಣ ಸಂಘದ ಪ್ರಥಮ ಅಧ್ಯಕ್ಷರು ಹಾಗೂ ಶ್ರೀರಾಮಕೃಷ್ಣರ ಮಾನಸಪುತ್ರರೂ ಆಗಿದ್ದ ಸ್ವಾಮಿ ಬ್ರಹ್ಮಾನಂದರು ಆಧ್ಯಾತ್ಮ ವಿಚಾರಗಳಲ್ಲಿ ಬಹಳ ಸೂಕ್ಷ್ಮಸಂವೇದಿಗಳಾಗಿದ್ದುದು ಎಲ್ಲರಿಗೂ ವಿದಿತ. ಅವರು ದಕ್ಷಿಣಭಾರತದ ಯಾತ್ರೆಯಲ್ಲಿದ್ದಾಗ ಬೆಂಗಳೂರಿನಿಂದ ಶಿವನಸಮುದ್ರದ ಬ್ಲಫ್‌ನಲ್ಲಿರುವ ಮೈಸೂರು ರಾಜ್ಯದ ವಿದ್ಯುದುತ್ಪಾದನೆಯ ಘಟಕದಲ್ಲಿ ನೌಕರಿಯಲ್ಲಿದ್ದ ಶ್ರೀ. ವಿ. ರಾಮನಾಥ ಕೌಶಿಕರ ಮನೆಗೆ ಅತಿಥಿಗಳಾಗಿ ಬಂದರು. ಇವರ ಮನೆಯಲ್ಲಿ ಪ್ರತಿಸಂಜೆ ರಾಮನಾಮವನ್ನು ಪಠಣ ಮಾಡುತ್ತಿದ್ದರು. ಕರ್ನಾಟಕದ ಹಳ್ಳಿಗಳಲ್ಲಿ, ರಾಮಮಂದಿರಗಳಲ್ಲಿ ರಾಮನಾಮವನ್ನು ಹಾಡುವ ವಾಡಿಕೆಯಿದೆ. ಇದನ್ನು ಆಲಿಸಿ, ಅದರ ಪ್ರಾಸಪೂರ್ಣ ನಾಮಗಳು ಹಾಗೂ ಭಕ್ತಿಭಾವಗಳಿಂದ ಪ್ರಭಾವಿತರಾಗಿ, ತಮ್ಮ ಶಿಷ್ಯ ಸ್ವಾಮಿ ಅಂಬಿಕಾನಂದರಿಗೆ ರಾಗಸಂಯೋಜನೆಯನ್ನು ಮಾಡಲು ಹೇಳಿ, ಸುಶ್ರಾವ್ಯವಾದ ಸಂಕೀರ್ತನೆಯಾಗಿ ಮಾಡಿದರು. ಇವತ್ತು ಭಾರತ ಹಾಗೂ ವಿದೇಶಗಳಲ್ಲಿರುವ ಶ್ರೀರಾಮಕೃಷ್ಣ ಆಶ್ರಮ ಹಾಗೂ ಮಠಗಳಲ್ಲಿ ರಾಮನಾಮ ಸಂಕೀರ್ತನೆ ಪ್ರತಿ ಏಕಾದಶಿ ಸಂಜೆ ನಡೆಯುತ್ತಿದ್ದು ಸಾವಿರಾರು ಭಕ್ತರಿಗೆ ಆನಂದ ಮತ್ತು ಶಾಂತಿಗಳನ್ನು ನೀಡುತ್ತಿವೆ. ಒಮ್ಮೆ ವಾರಾಣಸಿಯ ರಾಮಕೃಷ್ಣ ಸೇವಾಶ್ರಮದಲ್ಲಿ ರಾಮನಾಮ ಸಂಕೀರ್ತನೆ ನಡೆಯುತ್ತಿದ್ದಾಗ ಆಗ ಅಲ್ಲಿಯೇ ಇದ್ದ ಸ್ವಾಮಿ ಬ್ರಹ್ಮಾನಂದರಿಗೆ ಮಾರುತಿಯ ದರ್ಶನವಾಯಿತು! ರಾಮನಾಮ ಸಂಕೀರ್ತನೆಯ ಪ್ರಾರಂಭದ ಶ್ಲೋಕಗಳ ಪಠನ ಆಗತಾನೆ ಪ್ರಾರಂಭವಾಗಿತ್ತು; ಆಗ ಒಬ್ಬ ವೃದ್ಧ ನಿಧಾನವಾಗಿ ಪ್ರಾರ್ಥನಾ ಮಂದಿರವನ್ನು ಪ್ರವೇಶಿಸಿದ. ಇದು ಬ್ರಹ್ಮಾನಂದರಿಗೆ ವಿಚಿತ್ರ ಕಾಣಿಸಿತು. ಆತ ಮೆಲ್ಲಗೆ ನಡೆದುಬಂದು ಶ್ರೀರಾಮನ ಚಿತ್ರಪಟದ ಪಕ್ಕದಲ್ಲೇ ನಿಂತುಕೊಂಡ. ಸ್ವಾಮಿ ಬ್ರಹ್ಮಾನಂದರು ಆ ವೃದ್ಧನನ್ನು ಹೀಗೆ ಎರಡು ಮೂರು ಬಾರಿ ನೋಡಿದರು. ಆತನನ್ನು ಈ ಹಿಂದೆ ಎಲ್ಲೂ ನೋಡಿದ ನೆನಪಾಗಲಿಲ್ಲ. ಆದರೆ ಕೆಲವು ಕ್ಷಣಗಳ ಬಳಿಕ ಮತ್ತೆ ನೋಡಿದಾಗ ಆ ವೃದ್ಧ ಅಲ್ಲಿರಲಿಲ್ಲ! ಆಗ ಅವರಿಗೆ ಗೊತ್ತಾಯಿತು, ರಾಮನಾಮ ಸಂಕೀರ್ತನೆಯ ಸಂದರ್ಭದಲ್ಲಿ ಬಂದು ಅಲ್ಲಿ ನಿಂತಿದ್ದ ಆ ವೃದ್ಧ ಸಾಕ್ಷಾತ್ ಮಾರುತಿಯಲ್ಲದೆ ಬೇರಾರೂ ಅಲ್ಲ ಎಂದು. ಅವರಿಗೆ ತುಲಸೀದಾಸರ ಈ ಪ್ರಸಿದ್ಧ ಶ್ಲೋಕ ನೆನಪಾಯಿತು:

ಯತ್ರ ಯತ್ರ ರಘುನಾಥಕೀರ್ತನಂ ತತ್ರ ತತ್ರ ಕೃತಮಸ್ತಕಾಂಜಲಿಂ ।
ಬಾಷ್ಪವಾರಿಪರಿಪೂರ್ಣ ಲೋಚನಂ
ಮಾರುತಿಂ ನಮತ ರಾಕ್ಷಸಾಂತಕಮ್ ॥

ಶ್ರೀರಾಮನ ಕೀರ್ತನೆ ನಡೆಯುವ ಎಲ್ಲೆಲ್ಲೂ ನಮಸ್ಕರಿಸುತ್ತ ನಿಲ್ಲುವ, ರಾಕ್ಷಸರಿಗೆ ಯಮನಂತಿರುವ, ಭಕ್ತಿಭಾವದಿಂದ ಆನಂದಬಾಷ್ಪದಿಂದ ತುಂಬಿರುವ ಕಣ್ಣುಳ್ಳ ಮಾರುತಿಗೆ ನಮಸ್ಕರಿಸೋಣ.

ಖ್ಯಾತ ಗಾಯಕಿ ಶ್ರೀಮತಿ ಎಂ.ಎಸ್. ಸುಬ್ಬಲಕ್ಷ್ಮಿಯವರ ಧ್ವನಿಸುರುಳಿಯ ಮೂಲಕ ಜನಸಾಮಾನ್ಯರಲ್ಲಿ ರಾಮನಾಮ ಸಂಕೀರ್ತನೆಯು ಹೆಚ್ಚು ಜನಪ್ರಿಯವಾಯಿತು.

ಬಹಳ ಜನರಿಗೆ ಈ ಕೃತಿಯ ರಚನಕಾರರು ಯಾರೆಂಬುದು ಗೊತ್ತಿಲ್ಲ. ನಾನು ಎಷ್ಟೋ ಜನವಿದ್ವಾಂಸರನ್ನು ಹಾಗೂ ಸ್ವಾಮಿಗಳನ್ನು ಈ ಕುರಿತು ವಿಚಾರಿಸಿದರೂ, ಇದರ ರಚನಕಾರರ ಬಗ್ಗೆ ಎಲ್ಲೂ ಸರಿಯಾದ ಮಾಹಿತಿ ಸಿಗಲಿಲ್ಲ. ಇದನ್ನು ಬರೆದವರು ಬಹುಶಃ ಅಜ್ಞಾತ ಕವಿಗಳಾಗಿರಬೇಕೆಂದೇ ಒಯಸಿರಬೇಕು. ಏಕೆಂದರೆ ಎಲ್ಲಿಯೂ ಅವರ ಅಂಕಿತವನ್ನು ಅಥವಾ ಅವರ ಹೆಸರನ್ನು ಸೂಚಿಸಿರುವುದಿಲ್ಲ. ಇತ್ತೀಚೆಗೆ ಖ್ಯಾತ ಸಂಶೋಧಕರು ಹಾಗೂ ಸಂಗೀತಜ್ಞರು ಆದ ಮೈಸೂರಿನ ಡಾ. ವಿ.ಎಸ್. ಸಂಪತ್ಕುಮಾರಾಚಾರ್ಯರು ಈ ಬಗ್ಗೆ ಕೆಲವು

ನಿಖರವಾದ ಮಾಹಿತಿಗಳನ್ನು ಒದಗಿಸಿದರು. ಅವರದೇ ಲೇಖನಿಯಿಂದ ಮೂಡಿಬಂದಿರುವ 'ಕರ್ನಾಟಕ ಸಂಗೀತ ಪಾರಿಭಾಷಿಕ ಶಬ್ದಕೋಶ'ದಲ್ಲೂ ಈ ವಿವರಗಳು ಇವೆ. ಇದನ್ನು ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗವು ಪ್ರಕಟಿಸಿದೆ. ಅವರ ಪ್ರಕಾರ, ಇದರ ಕೃತಿಕಾರರ ಹೆಸರು **ಪಂಡಿತ ತಿರುವಾದಿ ಲಕ್ಷ್ಮಣಾಚಾರ್ಯರು** (ಮರಣ ೧೯೧೯). ಅವರು ತಿರುವೈಯಾರಿನ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು, ಖ್ಯಾತ ಹರಿಕಥಾ ವಿದ್ವಾಂಸರೂ ಆಗಿದ್ದರು. ಇವರ ಕಥಾಕಾಲಕ್ಷೇಪವು ಬಹಳ ಜನಪ್ರಿಯವಾಗಿತ್ತು, ಅವರ ಸಮಕಾಲೀನರು ಹಾಗು ಸಂಗೀತದ ದಿಗ್ಗಜರಾದ ಮಹಾವೈದ್ಯನಾಥ ಅಯ್ಯರ್ ಅವರು ಮೊದಲನೇ ಹಾಡನ್ನು, ಪಟ್ನಂ ಸುಬ್ರಹ್ಮಣ್ಯ ಅಯ್ಯರ್ ಅವರು ಎರಡನೇ ಹಾಡನ್ನು ಹಾಡಿ ಕಥಾಕಾಲಕ್ಷೇಪಕ್ಕೆ ಚಾಲನೆಯನ್ನು ಕೊಡುತ್ತಿದ್ದರು. ಲಕ್ಷ್ಮಣಾಚಾರ್ಯರಿಗೆ ಅಸಾಧಾರಣವಾದ ಜ್ಞಾಪಕಶಕ್ತಿ ಹಾಗು ಪಾಂಡಿತ್ಯವಿತ್ತು. ಅವರಿಗೆ "ವಿಚಿತ್ರ ಶತಾವಧಾನಿ" ಎಂಬ ಬಿರುದಿತ್ತು. ಪರಬ್ರಹ್ಮ ವೈಭವ ಪ್ರಕಾಶ ಸಭೆಯ ಅಧ್ಯಕ್ಷರಾಗಿ ತ್ಯಾಗರಾಜೋತ್ಸವವನ್ನು ಪ್ರತಿ ವರ್ಷವೂ ಬಹಳ ವೈಭವದಿಂದ ನೆರವೇರಿಸುತ್ತಿದ್ದರು. ತಂಜಾವೂರು ಕೃಷ್ಣ ಭಾಗವತರ ಹರಿಕಥೆಗಳನ್ನು ಕೇಳಿ ಅವರು ಸ್ಫೂರ್ತಿ ಪಡೆದಿದ್ದರು. ಆಚಾರ್ಯರು ತ್ಯಾಗರಾಜರ ಕೃತಿಗಳಿಗೆ ವ್ಯಾಖ್ಯಾನ ಮಾಡುತ್ತಿದ್ದುದು ಅರ್ಥಪೂರ್ಣವೂ, ಅದ್ವಿತೀಯವೂ ಆಗಿರುತ್ತಿತ್ತು. ಇವರು ತ್ಯಾಗರಾಜರ ಕೃತಿಗಳನ್ನು ೧೧೧ನೆಯ ಉಪನಿಷತ್ತು ಎನ್ನುತ್ತಿದ್ದರು. ಇವರು ಮಾಡುತ್ತಿದ್ದ 'ರುಕ್ಮಿಣೀ ಕಲ್ಯಾಣ' ಹರಿಕಥಾ ಕಾಲಕ್ಷೇಪವು ಆ ಕಾಲಕ್ಕೆ ಬಹಳ ಪ್ರಸಿದ್ಧವಾಗಿತ್ತು.

'ತಿರುವೈಯಾರ್' ಊರಿನ ಹೆಸರಿನ ಅಪಭ್ರಂಶವೇ ತಿರುವಾದಿ. ಇದು ತಂಜಾವೂರಿನ ಸಮೀಪದಲ್ಲಿರುವ ಪುಣ್ಯಕ್ಷೇತ್ರ ಇಲ್ಲಿ ಕಾವೇರಿ ನದಿ ಹರಿಯುತ್ತದೆ. ಸಂತ ತ್ಯಾಗರಾಜರು ಇಲ್ಲಿ ವಾಸವಾಗಿದ್ದರು. ತ್ಯಾಗರಾಜರ ಮನೆ, ಅವರ ಆರಾಧ್ಯ ದೈವವಾದ ಶ್ರೀಸೀತಾಲಕ್ಷ್ಮಣ ಹನುಮತ್ಸಮೇತ ಶ್ರೀರಾಮಚಂದ್ರ ಪ್ರತಿಮೆಗಳು ಹಾಗೂ ಅವರ (ತ್ಯಾಗರಾಜ) ಸಮಾಧಿಯನ್ನು ಅವರ ಭಕ್ತರು ಜೋಪಾನವಾಗಿ ಕಾಪಾಡಿಕೊಂಡು ಬಂದಿದ್ದಾರೆ. ತಿರುವಾದಿ ಲಕ್ಷ್ಮಣಾಚಾರ್ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಲು ಜುಲೈ ೨೦೦೫ರಲ್ಲಿ ತಿರುವೈಯಾರಿಗೆ ಹೋಗುವ ಅವಕಾಶ ನನಗೆ ದೊರಕಿತು. ಅಲ್ಲಿ ಅವರ ವಂಶಸ್ಥರು ಯಾರೂ ಇರಲಿಲ್ಲ. ಅಲ್ಲಿನ ಸಂಸ್ಕೃತ ಕಾಲೇಜಿನಲ್ಲಿಯೂ ಯಾವ ಮಾಹಿತಿಯೂ ಸಿಗಲಿಲ್ಲ. ಚೆನ್ನೈನಲ್ಲಿರುವ ಲಕ್ಷ್ಮಣಾಚಾರ್ಯರ ಮರಿಮಗನ ವಿಳಾಸ ದೊರಕಿತು. ಮತ್ತೆ ಏಪ್ರಿಲ್ ೨೦೦೬ರಲ್ಲಿ ಚೆನ್ನೈಗೆ ಹೋದಾಗ ಅವರ ಮರಿಮಗನನ್ನು ಭೇಟಿಮಾಡಿದ್ದೆ. ಅವರ ಹತ್ತಿರ ಕೂಡ ಹೆಚ್ಚಿನದೇನೂ ಮಾಹಿತಿ ಸಿಗಲಿಲ್ಲ. ಲಕ್ಷ್ಮಣಾಚಾರ್ಯರ ಫೋಟೋ ಇದ್ದರೆ ತೋರಿಸಿ ಎಂದು ಕೇಳಿದೆ. ಅದೂ ಕೂಡ ಇಲ್ಲ ಎಂದು ತಿಳಿಸಿದರು. ಬಹುಶಃ ಕಾಲವಾದ ಮೇಲೂ ಲಕ್ಷ್ಮಣಾಚಾರ್ಯರಿಗೆ ಅಜ್ಞಾತರಾಗಿಯೇ ಉಳಿಯಬೇಕೆಂಬ ಇಚ್ಛೆಯಿತ್ತೋ ಏನೋ?

(ಛತ್ತೀಸ್‌ಘಡದ ರಾಯಪುರದ ರಾಮಕೃಷ್ಣ ಮಠದಿಂದ ಹಿಂದಿ ಮಾಸಪತ್ರಿಕೆಯು ಪ್ರಕಟವಾಗುತ್ತಿದೆ. ಅದರ ಸಂಪಾದಕರಾದ ಸ್ವಾಮಿ ವಿದೇಹಾತ್ಮಾನಂದರಿಗೆ ಇತ್ತೀಚಿಗೆ ದೊರೆತ ಮಾಹಿತಿಯಂತೆ ಉತ್ತರ ಕರ್ನಾಟಕದ ಕರಾರ್ ಎಂಬ ಪ್ರದೇಶದಲ್ಲಿದ್ದ ಶ್ರೀ ವಿಠೋಬಾ ಅಣ್ಣ ದಫ್ತರ್‌ದಾರ್ ಎಂಬುವವರು ರಾಮನಾಮದ ರಚನೆಯನ್ನು ಮಾಡಿದರು. ಹೆಚ್ಚಿನ ಮಾಹಿತಿ ದೊರೆತಾಗ ನಿಖರವಾಗಿ ಪ್ರಕಟಿಸಲು ಪ್ರಯತ್ನಿಸುತ್ತೇವೆ.– ಸಂ.)

## ಶ್ರೀರಾಮಕೃಷ್ಣರು ಹಾಕಿಕೊಟ್ಟ ಆದರ್ಶ

ಶಿಷ್ಯರು ಅನುಸರಿಸುವುದಕ್ಕೆ ಮಾದರಿಯಾಗುವಂತೆ ಶ್ರೀರಾಮಕೃಷ್ಣರು ತಮ್ಮ ಜೀವನವನ್ನು ರೂಪಿಸಿಕೊಂಡಿದ್ದರು. ಉಳಿದ ಶಿಷ್ಯರಿಗಿಂತ ಹಿರಿಯನಾದರೂ, ಗೋಪಾಲನು ಶ್ರೀರಾಮಕೃಷ್ಣರು ಹಾಕಿಕೊಟ್ಟ ಆದರ್ಶವನ್ನು ಅನುಸರಿಸಲು ತುಂಬ ಕಷ್ಟಪಟ್ಟು ಪ್ರಯತ್ನಿಸುತ್ತಿದ್ದನು. ಅವನ ಪ್ರಾಮಾಣಿಕತೆ, ಪ್ರೇಮ ಹಾಗೂ ಸ್ಥಿರವಾದ ಅರ್ಪಣಾಭಾವವನ್ನು ಗುರುಭಾಯಿಗಳೂ ಪ್ರಶಂಸಿಸುತ್ತಿದ್ದರು. ಒಂದು ದಿನ ಶ್ರೀರಾಮಕೃಷ್ಣರು **'ತಮಾಷೆಗಾಗಿಯಾಗಲಿ ಮೈಮರೆತಾಗಲಿ ಎಂದೂ ಸುಳ್ಳು ಹೇಳಬೇಡ'** ಎಂದು ಹೇಳುತ್ತಿದ್ದುದನ್ನು ಗೋಪಾಲನು ಕೇಳಿಸಿಕೊಂಡನು. ಈ ಬೋಧನೆಯನ್ನು ಚಾಚೂ ತಪ್ಪದೆ ತಾನು ಅನುಷ್ಠಾನಕ್ಕೆ ತಂದುದಲ್ಲದೆ ಇತರರಿಗೂ ಅನುಸರಿಸುವಂತೆ ಪ್ರೋತ್ಸಾಹಿಸಿದನು. ಒಮ್ಮೆ ಶ್ರೀರಾಮಕೃಷ್ಣರ ಹೊಟ್ಟೆ ಕೆಟ್ಟಾಗ ವೈದ್ಯರು ಮೂರು ನಿಂಬೆಹಣ್ಣುಗಳ ರಸವನ್ನು ಔಷಧಿಯಾಗಿ ಬಳಸಬೇಕೆಂದರು. ಗೋಪಾಲನು ಮೂರಕ್ಕಿಂತಲೂ ಹೆಚ್ಚು ನಿಂಬೆಹಣ್ಣುಗಳನ್ನು ತರಲು, ಶ್ರೀರಾಮಕೃಷ್ಣರು ಮೂರನ್ನು ಮಾತ್ರವೇ ತೆಗೆದುಕೊಂಡು, ಉಳಿದವನ್ನು ವಾಪಸು ಕೊಡುವಂತೆ ಹೇಳಿದರು. ಶ್ರೀರಾಮಕೃಷ್ಣರು ಮೂರ್ತೀವೆತ್ತ ಸತ್ಯವೇ ಆಗಿರುವರು, ಅವರ ಮಾತು ಕೃತಿಗಳು ಯಾವಾಗಲೂ ಒಂದೇ ಎಂದು ಗೋಪಾಲನಿಗೆ ಮನವರಿಕೆಯಾಯಿತು. ಮುಂದೆ ಈ ಗೋಪಾಲನೇ ಸ್ವಾಮಿ ಅದ್ವೈತಾನಂದರಾದರು.



ಸ್ವಾಮಿ ಅದ್ವೈತಾನಂದ